ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು

೧೧೦೨. ಶ್ರೀ ಚಂದ್ರಶೇಖರ ಮುಮಾನಿ (ಪರಸಗಡ) ಮಾನ್ಯ ಕೃಷಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ಯಾವಾಗ ಸ್ಥಾಪನೆ ಮಾಡಲಾಗುವುದು ?

ಶ್ರೀ ಎಂ. ಪಿ. ಪ್ರಕಾಶ್ (ಕೃಷಿ ರಾಜ್ಯ ಮಂತ್ರಿಗಳು)

ಅ) ರಾಜ್ಯದಲ್ಲಿ ಎರಡನೇ ಕೃಷಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಪ್ರಶ್ನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ನೀಡಲಾದ ಉಚಿತ ಪಠ್ಯ ಪುಸ್ತಕಗಳು

೩೩೧. ಶ್ರೀ ಆರ್. ಎನ್. ನಾಯ್ಕ (ಭಟ್ಕಳ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಭಟ್ಕಳ, ಕುಮಟ ತಾಲ್ಲೂಕುಗಳಲ್ಲಿ ಆನುಕ್ರಮವಾಗಿ ಒಂದರಿಂದ ಏಳನೇ ವರ್ಗಗಳಲ್ಲಿ ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಆ) ಕುಮಟ, ಹೊನ್ನಾವರ, ಭಟ್ಕಳ ತಾಲ್ಲೂಕಿನ ಒಂದರಿಂದ ಏಳನೇ ವರ್ಗಗಳ ವಿದ್ಯಾರ್ಥಿಗಳಿಗೆ ಬೇಕಾಗಬಹುದೆಂದು ಅಂದಾಜು ಮಾಡಲಾದ ಪುಸ್ತಕಗಳ ಸಂಖ್ಯೆ ಎಷ್ಟು ?
(ವರ್ಗವಾರು ಮಾಹಿತಿಯನ್ನು ನೀಡುವುದು)

ಇ) ೧೯೮೫ನೇ ಇಸವಿ ಜುಲೈ ೩ರ ಪೂರ್ವದಲ್ಲಿ ಮೇಲ್ಕಂಡ ಪ್ರತಿ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ನೀಡಲಾದ ಉಚಿತ ಪುಸ್ತಕಗಳ ಸಂಖ್ಯೆ ಎಷ್ಟು ?

ಈ) ಇನ್ನೂ ಹಂಚಬೇಕಾದ ಪುಸ್ತಕಗಳೆಷ್ಟು ? ಹಾಗೂ ಅದನ್ನು ಯಾವಾಗ ಹಂಚಲಾಗುವುದು?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ೧೪-೮-೧೯೮೫ ರಂದು ವಿದ್ಯಾರ್ಥಿಗಳ ಸಂಖ್ಯೆ

		ತಾಲ್ಲೂಕುಗಳು	
ತರಗತಿ	ಹೊನ್ನಾವರ	ಭಟ್ಕಳ	ಕುಮಟ
೧	೬,೫೦೧	೪,೩೩೨	೪,೨೬೦
೨	೩,೯೬೦	೩,೫೧೭	೪,೦೪೧
೩	೩,೭೩೪	೩,೨೦೨	೩,೨೬೨
೪	೨,೮೩೪	೨,೪೫೨	೩,೭೧೫
೫	೨,೪೦೦	೧,೯೬೫	೨,೮೩೫
೬	೨,೦೭೭	೧,೯೪೮	೨,೧೭೦
೭	೧,೪೯೫	೧,೪೪೩	೧,೬೦೧
ಒಟ್ಟು	೨೩,೦೩೧	೧೮,೮೫೯	೨೧,೮೪೪